ಬಾಬರನು ಎಂದಿನಂತೆ ಬೆಳಿಗ್ಗೆ ಕುದುರೆ ಸವಾರಿ ಮಾಡುತ್ತಾ ಊರ ಹೊರಗೆ ಹೊರಟಿದ್ದ. ದಾರಿಯಲ್ಲಿ ಮುದುಕನೊಬ್ಬ ನೆಲವನ್ನು ಅಗೆಯುವುದನ್ನು ಕಂಡು ತನ್ನ ಕುದುರೆಯನ್ನು ನಿಲ್ಲಿಸಿ, 'ಅಯ್ಯಾ, ಈ ವಯಸ್ಸಿನಲ್ಲಿ ನೀನೆಂಥಹ ಕೆಲಸ ಮಾಡುತ್ತಿರುವೆ. ನಿನಗೆ ಆಯಾಸವಾಗುವುದಿಲ್ಲವೇ?' ಎಂದು ಕೇಳಿದ.

'ಮಹಾರಾಜ, ನಾನಿಲ್ಲಿ ಈ ಹುಣಸೆ ಸಸಿಗಳನ್ನು ನೆಡುತ್ತಿದ್ದೇನೆ' ಎಂದನು.

ಅವನ ಮಾತುಗಳನ್ನು ಕೇಳಿ ಬಾಬರನು ಜೋರಾಗಿ ನಗಲು ಪ್ರಾರಂಭಿಸಿದ.

'ನೀನು ಮೂರ್ಖ! ಈ ಗಿಡ ದೊಡ್ಡದಾಗಿ ಫಲ ಕೊಡುವವರೆಗೂ ನೀನು ಬದುಕಿರುತ್ತೀಯಾ?' ಎಂದನು.

ಅದಕ್ಕೆ ಆ ಮುದುಕ 'ಮಹಾರಾಜ, ಹಿಂದೆ ನಮ್ಮ ಹಿರಿಯರು ನನ್ನಂತೆ ಮರಗಳನ್ನು ನೆಟ್ಟಿರುವುದರಿಂದ ಈ ದಿನ ಆ ಮರಗಳ ಫಲವನ್ನು ನಾವು ಅನುಭವಿಸುತ್ತಿದ್ದೇವೆ. ಅದೇ ರೀತಿಯಲ್ಲಿ ಮುಂದಿನ ನನ್ನ ಮಕ್ಕಳು, ಮೊಮ್ಮಕ್ಕಳು ಈ ಮರದ ಫಲವನ್ನು ತಿನ್ನಲೆಂದು ನಾನಿಲ್ಲಿ ಸಸಿಗಳನ್ನು ನೆಡುತ್ತಿದ್ದೇನೆ' ಎಂದನು. ಬಾಬರನು ಮುದುಕನ ಮಾತಿಗೆ 'ಭೇಷ್' ನಿನ್ನ ಮಾತು ಸರಿಯಾಗಿದೆ. ನಿನ್ನ ಬುದ್ಧಿವಂತಿಕೆಯನ್ನು ಮೆಚ್ಚಿಕೊಂಡೆ. ಈ ಚೀಲದೊಳಗೆ ತುಂಬಾ ಚಿನ್ನದ ನಾಣ್ಯಗಳಿವೆ. ಇದನ್ನು ನಿನಗೆ ಬಹುಮಾನವಾಗಿ ಕೊಡುತ್ತಿದ್ದೇನೆ ತೆಗೆದುಕೊ' ಎಂದನು.

ಮುದುಕ ತಲೆ ಬಾಗಿಸಿ ವಂದಿಸುತ್ತಾ 'ಧನ್ಯವಾದಗಳು ಮಹಾರಾಜ, ಜನರು ಗಿಡ ನೆಟ್ಟ ನಂತರ ಫಲ ಕೊಡಲು ಅದು ದೊಡ್ಡದಾಗುವವರೆಗೂ ಕಾಯುತ್ತಾರೆ. ಅದು ಲೋಕ ಧರ್ಮ. ಆದರೆ ನನಗೆ ಸಸಿ ನೆಟ್ಟ ಕೂಡಲೇ ಫಲ ಬಂದೇ ಬಿಟ್ಟಿತಲ್ಲ!' ಎಂದನು.

ಮುದುಕನ ಮಾತುಗಳನ್ನು ಕೇಳಿ ಬಾಬರನಿಗೆ ಇನ್ನಷ್ಟು ಸಂತೋಷವಾಗಿ ತನ್ನ ಬಳಿಯಲ್ಲಿದ್ದ ಇನ್ನೊಂದು ಚಿನ್ನದ ನಾಣ್ಯದ ಚೀಲವನ್ನು ಅವನಿಗೆ ಬಹುಮಾನವಾಗಿ ಕೊಟ್ಟನು. 'ಮಹಾರಾಜ, ನಿಮಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ. ಗಿಡಗಳನ್ನು ನೆಟ್ಟವರಿಗೆ ಫಲಕ್ಕೆ ಬಂದ ಮರ ಒಂದು ಸಲ ಮಾತ್ರ ಫಲ ಕೊಡುತ್ತದೆ. ಆದರೆ ನಾನು ಗಿಡ ನೆಟ್ಟ ದಿನವೇ ಎರಡು ಬಾರಿ ಫಲವನ್ನು ಪಡೆದಿದ್ದೇನೆ' ಎಂದನು.

ಮುದುಕನ ಬುದ್ಧಿವಂತಿಕೆಯ ಮಾತುಗಳನ್ನು ಕೇಳಿ ಬಾಬರನಿಗೆ ಇನ್ನೂ ಸಂತೋಷವಾಗಿ ತನ್ನಲ್ಲಿದ್ದ ಇನ್ನೊಂದು ಚಿನ್ನದ ನಾಣ್ಯದ ಚೀಲವನ್ನು ಅವನಿಗೆ ಕೊಟ್ಟು ಅಲ್ಲಿಂದ ಕುದುರೆಯನ್ನು ಏರಿ ಹೊರಟನು.

ಬಾಬರನು ಸ್ವಲ್ಪ ದೂರ ಹೋಗುವಷ್ಟರಲ್ಲಿ ಯಾರೋ ಹಿಂದಿನಿಂದ ಕೂಗಿದ ಹಾಗಾಗಿ ಹಿಂದಿರುಗಿ ನೋಡಿದನು. ಬಾಬರನಿಗೆ ಆಶ್ಚರ್ಯವಾಯಿತು. ಮುದುಕನ ವೇಷವನ್ನು ತೆಗೆದು ಹಾಕಿ ಅಲ್ಲಿ ತೆನಾಲಿರಾಮ ನಿಂತಿದ್ದನು.

ಆಗ ಬಾಬರನು ಅವನಲ್ಲಿ 'ಇಷ್ಟು ಹೊತ್ತು ಮಾತಾಡಿದವನು ನೀನೋ?' ಎಂದು ಕೇಳಿದನು.

'ಹೌದು ಮಹಾರಾಜ, ನಾನೇ ತೆನಾಲಿರಾಮ. ಮುದುಕನ ವೇಷವನ್ನು ಧರಿಸಿದ್ದೆ. ಅದಕ್ಕೆ ಕಾರಣವೂ ಇದೆ. ನಮ್ಮ ದೊರೆಯಾದ ಕೃಷ್ಣದೇವರಾಯರು ನಿಮ್ಮ ರಾಜ್ಯದಿಂದ ಹಿಂತಿರುಗಿ ಬರುವಾಗ ತಮ್ಮಿಂದ ಒಂದು ಚೀಲ ಚಿನ್ನದ ನಾಣ್ಯಗಳನ್ನು ಬಹುಮಾನವಾಗಿ ತೆಗೆದುಕೊಂಡು ಬಾ ಎಂದಿದ್ದರು. ಆದರೆ ಈಗ ನನಗೆ ಮೂರು ಚೀಲ ಚಿನ್ನದ ನಾಣ್ಯಗಳು ದೊರೆತಿವೆ' ಎಂದನು.

ತೆನಾಲಿರಾಮನ ಚಾತುರ್ಯದ ಮಾತುಗಳನ್ನು ಕೇಳಿ ಬಾಬರನಿಗೆ ತುಂಬಾ ಸಂತೋಷವಾಗಿ ತನ್ನಲ್ಲಿದ್ದ ಇನ್ನೊಂದು ಚಿನ್ನದ ನಾಣ್ಯಗಳ ಚೀಲವನ್ನು ಉಡುಗೊರೆಯಾಗಿ ಅವನಿಗೆ ಕೊಟ್ಟನು. ಆನಂತರ ಬಾಬರನು ತೆನಾಲಿರಾಮನನ್ನು ಸಂತೋಷದಿಂದ ವಿಜಯನಗರಕ್ಕೆ ಬೀಳ್ಕೊಟ್ಟನು.

■ (ಸಂಗ್ರಹ) ವೇದಾವತಿ ಹೆಚ್. ಎಸ್.




ಚಿತ್ರ: ವಿಜಯಕುಮಾರಿ ಆರ್.

# ಹಕ್ಕಿಯ ಭಾಷಣ

ಹಕ್ಕಿಯೊಂದು ಐದು ಗಂಟೆಗೆ
ಎದ್ದು ಬಂದಿತು!
ಮನೆ ಮುಂದೆ ವಿದ್ಯುತ್
ತಂತಿ ಮೇಲೆ ಕೂತಿತು!

ಅತ್ತ ಇತ್ತ ಕೋಳಿ, ಕಾಗೆಯನ್ನು
ನೋಡಿತು
ನಾನೆ ಮೊದಲು ಎದ್ದಿರುವೆ
ಎಂದು ಬೀಗಿತು!

ಚುನಾವಣೆ ಭಾಷಣಕ್ಕೆ
ತಯಾರಿ ನಡೆಸಿತು!
ನೋಟಿಗಾಗಿ ವೋಟು ಬೇಡ
ಎಂದು ಕೂಗಿತು!
ಹಿತಕ್ಕಾಗಿ ಮತ ಹಾಕಿ
ಎಂದು ಬೇಡಿತು!
ಅಳಿವು ಉಳಿವು ನಮ್ಮದೆಲ್ಲಾ
ನಿಮ್ಮದೆಂದಿತು!

ಮಲಗಿಕೊಂಡೇ ಆಲಿಸಿದೆ
ಹಕ್ಕಿ ಭಾಷಣ!
ಕುತೂಹಲಕ್ಕೆ ಎದ್ದು ಬಂದೆ
ಹಕ್ಕಿ ನೋಡಲು!
ಕತ್ತಲಿನ್ನೂ ಕವಿದಿತ್ತು
ಸುತ್ತಮುತ್ತಲು!

'ಮಲಗು ಇನ್ನೂ ಕತ್ತಲು' ಎಂದು
ಅಮ್ಮ ಕರೆದಳು!
ಬಾಗಿಲನ್ನು ಹಾಕಿದೆ
ಸದ್ದುಮಾಡದೆ!
ಭಾನುವಾರ ರಜೆ ಎಂದು
ನಿದ್ದೆ ಮಾಡಿದೆ!

■ ಮಾಸ ಬೆಳಲಗೆರೆ